"ಮಧುರ ಮಕ್ಕಳೇ: ತಮ್ಮನ್ನು ತಾವು ಆತ್ಮ ಸಹೋದರ-ಸಹೋದರರೆಂದು ತಿಳಿದು ಪರಸ್ಪರದಲ್ಲಿ ಆತ್ಮಿಕ ಪ್ರೇಮದಿಂದಿರಿ, ಸತೋಪ್ರಧಾನರಾಗ ಬೇಕೆಂದಿದ್ದರೆ ಯಾರದ್ದೇ ಬಲಹೀನತೆಗಳನ್ನು ನೋಡಬೇಡಿ"

ಪ್ರಶ್ನೆ: ಯಾವುದರ ಆಧಾರದಿಂದ ಬಾಬಾರವರೊಂದಿಗೆ ಪದಮದಷ್ಟು ಆಸ್ತಿಯನ್ನು ಪಡೆದುಕೊಳ್ಳಲು ಸಾಧ್ಯ?

ಉತ್ತರ: ಬಾಬಾರವರಿಂದ ಪದಮದಷ್ಟು ಆಸ್ತಿಯನ್ನು ಪಡೆಯಲು ನೆನಪಿನ ಯಾತ್ರೆಯಲ್ಲಿರಿ. ಒಬ್ಬ ತಂದೆಯನ್ನು ಹೊರತು ಪಡಿಸಿ, ಬೇರೆಲ್ಲಾ ವಿಚಾರಗಳನ್ನು ಮರೆಯಿರಿ. ಇಂತಹವರು ಈ ರೀತಿ ಮಾಡುತ್ತಾರೆ. ಇವರು ಹೀಗೆ.... ಈ ವಿಚಾರಗಳಲ್ಲಿ ಸಮಯವನ್ನು ವ್ಯರ್ಥವಾಗಿ ಕಳೆಯಬೇಡಿ. ಗುರಿ ಬಹಳ ಉನ್ನತವಾಗಿದೆ. ಆದ್ದರಿಂದ ಸದಾ ಸತೋಪ್ರಧಾನರಾಗುವ ಲಕ್ಷ್ಯವನ್ನಿಟ್ಟುಕೊಳ್ಳಿ. ಬಾಬಾರವರ ಪ್ರೇಮದಲ್ಲಿ ಲೀನವಾಗಿರಿ, ತಮಗೆ ತಾವೇ ಸೂಕ್ಷ್ಮ ಚೆಕಿಂಗ್ ಮಾಡಿಕೊಳ್ಳುತ್ತಿರಿ ಆಗ ಪೂರ್ತಿ ಆಸ್ತಿಯನ್ನು ಪಡೆದುಕೊಳ್ಳಲು ಸಾಧ್ಯ.

ಓಂ ಶಾಂತಿ. ಈ ಸಮಯದಲ್ಲಿ ಇಲ್ಲಿ ಕುಳಿತಿರುವ ಮಕ್ಕಳಿಗೆ ತಿಳಿದಿದೆ ಬೇಹದ್ದಿನ ತಂದೆ ಪುನಃ ಸತೋಪ್ರಧಾನರನ್ನಾಗಿ ಮಾಡುತ್ತಿದ್ದಾರೆ. ಮೂಲ ಯುಕ್ತಿಯನ್ನು ತಿಳಿಸುತ್ತಿದ್ದಾರೆ ತಮ್ಮನ್ನು ತಾವು ಆತ್ಮ ಸಹೋದರ-ಸಹೋದರ ಎಂದು ತಿಳಿಯಿರಿ. ಮುಖ್ಯ ಶಿಕ್ಷಣವನ್ನು ನೀಡುತ್ತಾರೆ - ಪರಸ್ಪರದಲ್ಲಿ ನಿಮಗೆ ಬಹಳ-ಬಹಳ ಆತ್ಮಿಕ ಪ್ರೇಮವಿರಬೇಕು, ಮೊದಲಿಗೆ ಇತ್ತು, ಈಗ ಇಲ್ಲ. ಮೂಲವತನದಲ್ಲಿ ಪ್ರೇಮದ ಮಾತೇ ಇರುವುದಿಲ್ಲ. ಬೇಹದ್ದಿನ ತಂದೆ ಬಂದು ಶಿಕ್ಷಣವನ್ನು ನೀಡುತ್ತಾರೆ. ಮಕ್ಕಳೇ ಇಂದು ನಾಳೆ ಎಂದು ಹೇಳುತ್ತಾ-ಹೇಳುತ್ತಾ ಸಮಯ ಮುಗಿಯುತ್ತಾ ಹೋಗುತ್ತಿದೆ. ದಿನ, ತಿಂಗಳು, ವರ್ಷ ಕಳೆದು ಹೊಗುತ್ತಿವೆ. ಬಾಬಾರವರು ತಿಳಿಸಿದ್ದಾರೆ. ನೀವು ಲಕ್ಷ್ಮಿ-ನಾರಾಯಣರಾಗಿದ್ದಿರಿ. ಯಾರು ನಿಮ್ಮನ್ನು ಈ ರೀತಿ ತಯಾರು ಮಾಡಿದ್ದರು? ಬಾಬಾರವರು. ಈ ವಿಚಾರವನ್ನು ಬಾಬಾರವರು ನಿಮಗೆ ತಿಳಿಸಿದ್ದಾರೆ. ನೀವು ಕೆಳಗೆ ಹೇಗೆ ಇಳಿಯುತ್ತೀರಿ? ಮೇಲಿಂದ ಕೆಳಗೆ ಇಳಿಯುತ್ತಾ ಇಳಿಯುತ್ತಾ ಸಮಯ ಮುಗಿದು ಹೋಗುತ್ತಿದೆ. ಆ ದಿನಗಳು ಮುಗಿಯಿತು, ಮಾಸಗಳು ಮುಗಿಯಿತು, ವರ್ಷಗಳು ಮುಗಿಯಿತು ಸಮಯವು ಸಹ ಮುಗಿಯಿತು. ನೀವು ತಿಳಿದುಕೊಂಡಿದ್ದೀರಿ ಮೊದ-ಮೊದಲು ನಾವು ಸತೋಪ್ರಧಾನರಾಗಿದ್ದೆವು. ನಮ್ಮಲ್ಲಿ ಪರಸ್ಪರ ಬಹಳ ಪ್ರೇಮವಿತ್ತು. ಬಾಬಾರವರು ನೀವೆಲ್ಲಾ ಸಹೋದರರಿಗೆ ಶಿಕ್ಷಣವನ್ನು ನೀಡಿದ್ದಾರೆ. ನೀವು ಸಹೋದರ-ಸಹೋದರರ ನಡುವೆ ಪರಸ್ಪರದಲ್ಲಿ ಬಹಳ ಪ್ರೀತಿಯಿರಬೇಕು. ನಾನು ನಿಮ್ಮ ತಂದೆಯಾಗಿದ್ದೇನೆ. ಎಷ್ಟು ಪ್ರೀತಿಯಿಂದ ನಾನು ನಿಮ್ಮನ್ನು ಸಂಭಾಲನೆ ಮಾಡುತ್ತೇನೆ. ನಿಮ್ಮನ್ನು ತಮೋಪ್ರಧಾನರಿಂದ ಸತೋಪ್ರಧಾನರನ್ನಾಗಿ ಮಾಡುತ್ತೇನೆ. ನಿಮ್ಮ ಗುರಿ-ಉದ್ದೇಶವೇ ಸತೋಪ್ರಧಾನರಾಗುವುದಾಗಿದೆ. ಎಷ್ಟು-ಎಷ್ಟು ನಾವು ಸತೋಪ್ರಧಾನರಾಗುತ್ತೇವೆ ಅಷ್ಟು ಖುಷಿಯಲ್ಲಿ ಇರುತ್ತೇವೆ ಎಂದು ತಿಳಿದಿದ್ದೀರಿ. ನಾವು ಸತೋಪ್ರಧಾನರಾಗಿದ್ದೆವು, ನಾವು ಸಹೋದರ-ಸಹೋದರರು ಪರಸ್ಪರದಲ್ಲಿ ಬಹಳ ಪ್ರೀತಿಯಿಂದ ಇದ್ದೆವು. ಈಗ ಬಾಬಾರವರ ಮೂಲಕ ನಮಗೆ ತಿಳಿದಿದೆ. ನಾವು ದೇವತೆಗಳು ಪರಸ್ಪರದಲ್ಲಿ ಬಹಳ ಪ್ರೀತಿಯಿಂದ ಇರುತ್ತಿದ್ದೆವು. ಈ ದೇವತೆಗಳ ಹಾಗೂ ಸ್ವರ್ಗದ ಬಹಳ ಮಹಿಮೆ ಇದೆ. ನೀವು ಸಹ ಸ್ವರ್ಗದ ನಿವಾಸಿಗಳಾಗಿದ್ದಿರಿ. ತದನಂತರ ಇಂದು ನಾಳೆ ಎನ್ನುತ್ತಾ ಕೆಳಗೆ ಇಳಿಯುತ್ತಾ ಬಂದಿದ್ದೀರಿ. ಒಂದನೇ ತಾರೀಖಿನಿಂದ ಹಿಡಿದು ಈ ದಿನ ಐದು ಸಾವಿರ ವರ್ಷದಲ್ಲಿ ಬಾಕಿ ಸ್ವಲ್ಪ ವರ್ಷಗಳು ಮಾತ್ರ ಉಳಿದಿದೆ. ಪ್ರಾರಂಭದಿಂದ ನೀವು ಹೇಗೆ ಪಾತ್ರವನ್ನು ಅಭಿನಯಿಸುತ್ತಾ ಬಂದಿದ್ದೀರಿ, ಎಂಬುದೆಲ್ಲಾ ಬುದ್ಧಿಯಲ್ಲಿದೆ. ಈಗ ದೇಹ- ಅಭಿಮಾನವಿರುವ ಕಾರಣ ಪರಸ್ಪರದಲ್ಲಿ ಆ ಪ್ರೀತಿ ಇಲ್ಲ. ಒಬ್ಬರು ಮತ್ತೊಬ್ಬರ ಬಲಹೀನತೆಯನ್ನೇ ನೋಡುತ್ತಿರುತ್ತಾರೆ. ಇಂತಹವರು ಈ ರೀತಿ ಇದ್ದಾರೆ. ದೇಹಿ-ಅಭಿಮಾನಿಯಾಗಿದ್ದಾಗ ಈ ರೀತಿ ಯಾರದ್ದೇ ಬಲಹೀನತೆಯನ್ನು ಹುಡುಕುವುದಿಲ್ಲ. ಪರಸ್ಪರದಲ್ಲಿ ಬಹಳ ಪ್ರೀತಿಯಿತ್ತು. ಈಗ ಪುನಃ ಅದೇ ಸ್ಥಿತಿಯನ್ನು ಧಾರಣೆ ಮಾಡಿಕೊಳ್ಳಬೇಕಾಗಿದೆ. ಇಲ್ಲಂತೂ ಒಬ್ಬರು ಮತ್ತೊಬ್ಬರನ್ನು ಪರಸ್ಪರದಲ್ಲಿ ಹೊಡೆದಾಡುವ ಜಗಳವಾಡುವ ದೃಷ್ಠಿಯಿಂದಲೇ ನೋಡುತ್ತಾರೆ. ಇದು ಯಾವಾಗ ಸಮಾಪ್ತಿಯಾಗುತ್ತದೆ? ಇದನ್ನು ಸಹ ಬಾಬಾರವರು ತಿಳಿಸಿಕೊಡುತ್ತಾರೆ - ಮಕ್ಕಳೇ ನೀವೇ ಪೂಜ್ಯ ದೇವೀ ದೇವತೆಗಳಾಗಿದ್ದಿರಿ. ತದನಂತರ ನಿಧಾನ ನಿಧಾನವಾಗಿ ಕೆಳಗೆ ಬೀಳುತ್ತಾ ನೀವು ತಮೋಪ್ರಧಾನರಾಗಿದ್ದೀರಿ. ನೀವು ಎಷ್ಟು ಸಿಹಿಯಾಗಿದ್ದಿರಿ. ಈಗ ಪುನಃ ಇದೇ ರೀತಿ ಮಧುರಾಗಿರಿ. ನೀವು ಸುಖದಾಯಿಯಾಗಿದ್ದಿರಿ, ಈಗ ದುಃಖದಾಯಿಯಾಗಿದ್ದೀರಿ. ರಾವಣ ರಾಜ್ಯದಲ್ಲಿ ಒಬ್ಬರು ಮತ್ತೊಬ್ಬರಿಗೆ ದುಃಖವನ್ನು ನೀಡಲು ಕಾಮವಿಕಾರವನ್ನು ಪ್ರಯೋಗಿಸಲಾರಂಭಿಸಿದ್ದೀರಿ. ಸತೋಪ್ರಧಾನರಾಗಿದ್ದಾಗ ಕಾಮವಿಕಾರವನ್ನು ಪ್ರಯೋಗಿಸುತ್ತಿರಲಿಲ್ಲ. ನಿಮ್ಮ ಈ

ಐದು ವಿಕಾರ ಎಷ್ಟು ದೊಡ್ಡ ಶತ್ರುವಾಗಿದೆ. ಇದಾಗಿದೆ ವಿಕಾರಿ ಪ್ರಪಂಚ. ಇದನ್ನೂ ಸಹ ನೀವು ತಿಳಿದುಕೊಂಡಿದ್ದೀರಿ ರಾಮರಾಜ್ಯವೆಂದು ಯಾವುದಕ್ಕೆ ಕರೆಯುತ್ತಾರೆ ಹಾಗೂ ರಾವಣ ರಾಜ್ಯವೆಂದು ಯಾವುದಕ್ಕೆ ಕರೆಯಲಾಗುತ್ತದೆ. ಇಂದು-ನಾಳೆ ಎನ್ನುತ್ತಾ ಸತ್ಯಯುಗ, ತ್ರೇತಾ, ದ್ವಾಪರ ಮುಗಿದುಹೋಯಿತು. ಈಗ ಕಲಿಯುಗವೂ ಸಹ ಸಮಾಪ್ತಿಯಾಗುವಂತಹದ್ದಿದೆ. ನೀವೇ ಸತೋಪ್ರಧಾರಿಂದ ತಮೋಪ್ರಧಾನಾಗಿದ್ದೀರಿ. ನಿಮ್ಮ ಆತ್ಮೀಕ ಖುಷಿ ಮಾಯವಾಗಿದೆ. ನಿಮ್ಮ ಆಯಸ್ಸು ಸಹ ಚಿಕ್ಕದಾಗಿದೆ. ಈಗ

ನಾನು ಬಂದಿದ್ದೇನೆ. ಅವಶ್ಯವಾಗಿ ನಿಮ್ಮನ್ನು ಸತೋಪ್ರಧಾನರನ್ನಾಗಿ ಮಾಡುತ್ತೇನೆ. ನೀವೇ ಕರೆದಿದ್ದೀರಿ ಪತಿತ ಪಾವನ ಬನ್ನಿ. ಬಾಬಾ ತಿಳಿಸಿಕೊಡುತ್ತಾರೆ - ಐದು ಸಾವಿರ ವರ್ಷಗಳ ನಂತರದಲ್ಲಿ ಸಂಗಮಯುಗ ಬಂದಾಗ ನಾನು ಬರುತ್ತೇನೆ. ಈಗ ನೀವು ತಮ್ಮನ್ನು ತಾವು ಆತ್ಮ ಎಂದು ತಿಳಿದು ತಂದೆಯನ್ನು ನೆನಪು ಮಾಡಿ. ಎಷ್ಟು ನೆನಪಿನಲ್ಲಿ ಇರುತ್ತೀರಿ ಅಷ್ಟು ಕಾಮನೆಗಳು ಹೊರಟುಹೋಗುತ್ತದೆ. ನೀವು ಸತೋಪ್ರಧಾನವಾಗಿದ್ದಾಗ ನಿಮ್ಮಲ್ಲಿ ಯಾವುದೇ ಕಾಮನೆಗಳು ಇರಲಿಲ್ಲ. ನೀವು ತಮ್ಮನ್ನು ತಾವು ದೇವಿ-ದೇವತೆಗಳೆಂದು ಕರೆಸಿಕೊಳ್ಳುತ್ತಿದ್ದಿರಿ. ಈಗ ಆ ಬಲಹೀನತೆಗಳನ್ನು ಹೇಗೆ ತೆಗೆದು ಹಾಕಬೇಕು? ಅಶಾಂತಿ ಆತ್ಮಕ್ಕೆ ಆಗುತ್ತದೆ. ಈಗ ತಮ್ಮನ್ನು ತಾವು ಪರೀಶಿಲಿಸಿಕೊಳ್ಳಬೇಕಾಗಿದೆ - ನಾವು ಅಶಾಂತರು ಏಕೆ ಆಗಿದ್ದೇವೆ? ನಾವು ಸಹೋದರ-ಸಹೋದರರಾಗಿದ್ದಾಗ ನಮ್ಮ ನಡುವೆ ಬಹಳ ಪ್ರೀತಿಯಿತ್ತು. ಈಗ ಪುನಃ ತಂದೆ ಬಂದಿದ್ದಾರೆ. ಹೇಳುತ್ತಾರೆ - ತಮ್ಮನ್ನು ತಾವು ಆತ್ಮ ಸಹೋದರ- ಈಗ ತಮ್ಮನ್ನು ತಾವು ಪರೀಶಿಲಿಸಿಕೊಳ್ಳಬೇಕಾಗಿದೆ - ನಾವು ಅಶಾಂತರು ಏಕೆ ಆಗಿದ್ದೇವೆ? ನಾವು ಸಹೋದರ ಸಹೋದರರಾಗಿದ್ದಾಗ ನಮ್ಮ ನಡುವೆ ಬಹಳ ಪ್ರೀತಿಯಿತ್ತು. ಈಗ ಪುನಃ ತಂದೆ ಬಂದಿದ್ದಾರೆ. ಹೇಳುತ್ತಾರೆ - ತಮ್ಮನ್ನು ತಾವು ಆತ್ಮ ಸಹೋದರ- ಸಹೋದರರೆಂದು ತಿಳಿಯಿರಿ. ಪರಸ್ಪರದಲ್ಲಿ ಪ್ರೇಮದಿಂದಿರಿ. ದೇಹಾಭಿಮಾನದಲ್ಲಿ ಬರುವುದರಿಂದ ಒಬ್ಬರು ಮತ್ತೊಬ್ಬರ ಬಲಹೀನತೆಯನ್ನೇ ನೋಡುತ್ತೀರಿ. ಬಾಬಾ ಹೇಳುತ್ತಾರೆ. ನೀವು ನಿಮ್ಮ ಶ್ರೇಷ್ಠ ಪದವಿಯನ್ನು ಪಡೆಯುವ ಪುರುಷಾರ್ಥವನ್ನು ಮಾಡಿರಿ. ನೀವು ತಿಳಿದುಕೊಂಡಿದ್ದೀರಿ. ನಮಗೆ ಬಾಬಾರವರು ಇಂತಹ ಆಸ್ತಿಯನ್ನು ನೀಡಿ ನಮ್ಮನ್ನು ಸಂಪನ್ನರನ್ನಾಗಿ ಮಾಡಿದ್ದರು. ಈಗ ಪುನಃ ಬಾಬಾರವರು ಬಂದಿದ್ದಾರೆಂದ ಮೇಲೆ ನಾವೇಕೆ ಅವರ ಮತದಂತೆ ನಡೆದು ಪುನಃ ಪೂರ್ತಿ ಆಸ್ತಿಯನ್ನು ಪಡೆಯಬಾರದು? ನಾವೇ ದೇವತೆಗಳಾಗಿದ್ದೆವು, ತದನಂತರ 84 ಜನ್ಮವನ್ನು ಪಡೆದೆವು.

ನೀವು ಮಧುರಾತಿ ಮಧುರ ಮಕ್ಕಳು ಎಷ್ಟೊಂದು ಅಡೋಲರಾಗಿದ್ದಿರಿ. ಯಾವುದೇ ಮತಬೇಧವಿರಲಿಲ್ಲ. ಯಾರನ್ನೂ ನಿಂಧಿಸುತ್ತಿರಲಿಲ್ಲ. ಈಗ ಒಂದಲ್ಲಾ ಒಂದು ಬಲಹೀನತೆಯಿದೆ. ಅದನ್ನೆಲ್ಲವನ್ನು ತೆಗೆದು ಹಾಕಬೇಕು. ನಾವೆಲ್ಲರು ಸಹೋದರ-ಸಹೋದರಾಗಿದ್ದೇವೆ. ಒಬ್ಬ ತಂದೆಯನ್ನೇ ನೆನಪು ಮಾಡಬೇಕು. ನಾವು ಸತೋಪ್ರಧಾನರಾಗಬೇಕೆಂಬ ಗುಂಗಿನಲ್ಲಿರಬೇಕು. ಇಂತಹವರು ಈ ರೀತಿ ಇದ್ದಾರೆ. ಇವರು ಹೀಗೆ ಮಾಡುತ್ತಾರೆ.. ಈ ಎಲ್ಲಾ ವಿಚಾರಗಳನ್ನು ಮರೆತುಬಿಡಬೇಕು. ಬಾಬಾ ಹೇಳುತ್ತಾರೆ. ಇದನ್ನೆಲ್ಲಾ ಬಿಟ್ಟುಬಿಡಿ. ತಮ್ಮನ್ನು ತಾವು ಆತ್ಮನೆಂದು ತಿಳಿಯಿರಿ. ಈಗ ಸತೋಪ್ರಧಾರಾಗಲು ಪುರುಷಾರ್ಥವನ್ನು ಮಾಡಿ. ದೇಹಾಭಿಮಾನದಲ್ಲಿ ಬರುವುದರಿಂದಲೇ ಅವಗುಣವನ್ನು ನೋಡಲಾಗುತ್ತದೆ. ತಮ್ಮನ್ನು ತಾವು ಆತ್ಮನೆಂದು ತಿಳಿದು ಬಾಬಾರವರನ್ನು ನೆನಪು ಮಾಡಿರಿ. ಸಹೋದರ-ಸಹೋದರೆಂದು ನೋಡಿದಾಗ ಗುಣವೇ-ಗುಣ ಕಂಡುಬರುತ್ತದೆ. ಸರ್ವರನ್ನು ಗುಣವಂತರನ್ನಾಗಿ ಮಾಡುವ ಪ್ರಯತ್ನ ಮಾಡಿರಿ. ಯಾರಾದರು ಉಲ್ಟಾ-ಸುಲ್ಟಾ ಏನಾದರು ಮಾಡಲಿ, ತಿಳಿದುಕೊಳ್ಳಬಹುದು ಇವರು ತಮೋ ಅಥವ ರಜೋ ಗುಣಿಗಳಾಗಿದ್ದಾರೆ ಎಂದ ಮೇಲೆ ಅವಶ್ಯವಾಗಿ ಅವರ ನಡತೆ ಅಂತಹದ್ದೇ ಇರುತ್ತದೆ. ಎಲ್ಲಕಿಂತ ಹೆಚ್ಚು ಗುಣ ಬಾಬಾರವರಲ್ಲಿದೆ. ಆದ್ದರಿಂದ ಬಾಬಾರವರಿಂದಲೇ ಗುಣವನ್ನು ಗ್ರಹಣಮಾಡಿಕೊಳ್ಳಿ, ಬೆರೆಲ್ಲಾ ವಿಚಾರವನ್ನು ಬಿಟ್ಟುಬಿಡಿ. ಅವಗುಣವನ್ನು ಬಿಟ್ಟು, ಗುಣವನ್ನು ಧಾರಣೆ ಮಾಡಿಕೊಳ್ಳಿ. ಬಾಬಾರವರು ಎಷ್ಟೊಂದು ಗುಣವಂತರನ್ನಾಗಿ ಮಾಡುತ್ತಾರೆ. ಹೇಳುತ್ತಾರೆ - ನೀವು ಮಕ್ಕಳೂ ಸಹ ನನ್ನ ಸಮಾನ ಗುಣವಂತರಾಗಬೇಕು. ಬಾಬಾರವರು ಸುಖದಾಯಿಯಾಗಿದ್ದಾರೆ. ನಾವು ಸಹ ಹೆಚ್ಚು ಗುಣ ಬಾಬಾರವರಲ್ಲಿದೆ, ಆದ್ದರಿಂದ ಬಾಬಾರವರಿಂದಲೇ ಗುಣವನ್ನು ಗ್ರಹಣಮಾಡಿಕೊಳ್ಳಿ. ಬೆರೆಲ್ಲಾ ವಿಚಾರವನ್ನು ಬಿಟ್ಟುಬಿಡಿ. ಅವಗುಣವನ್ನು ಬಿಟ್ಟು, ಗುಣವನ್ನು ಧಾರಣೆ ಮಾಡಿಕೊಳ್ಳಿ. ಬಾಬಾರವರು ಎಷ್ಟೊಂದು ಗುಣವಂತರನ್ನಾಗಿ ಮಾಡುತ್ತಾರೆ. ಹೇಳುತ್ತಾರೆ ನೀವು ಮಕ್ಕಳೂ ಸಹ ನನ್ನ ಸಮಾನ ಗುಣವಂತರಾಗಬೇಕು. ಬಾಬಾರವರು ಸುಖದಾಯಿಯಾಗಿದ್ದಾರೆ, ನಾವು ಸಹ ಸುಖದಾಯಿಯಾಗಬೇಕು. ಕೇವಲ ಇದೇ ನಶೆಯಿರಬೇಕು ನಾವು ಸತೋಪ್ರಧಾನರಾಗಬೇಕು. ಬೇರೆಯಾವುದೇ ಮಾತುಗಳನ್ನು ಕೇಳಬೇಡಿ ಹಾಗೂ ನಿಂದನೆ ಮಾಡಬೇಡಿ. ಎಲ್ಲರಲ್ಲೂ ಒಂದಲ್ಲಾ ಒಂದು ಕಾಮನೆಗಳಿವೆ. ಯಾರೂ ತಿಳಿದುಕೊಳ್ಳಲು ಸಾಧ್ಯವಾಗಂತಹ ಕಾಮನೆಗಳಿರುತ್ತದೆ. ಅನ್ಯರು ತಿಳಿದುಕೊಳ್ಳುತ್ತಾರೆ - ಇವರಲ್ಲಿ ಬಲಹೀನತೆಗಳಿವೆ. ಅವರು ತಮ್ಮನ್ನು ತಾವು ಬಹಳ ಒಳ್ಳೆಯವರೆಂದು ತಿಳಿದುಕೊಳ್ಳುತ್ತಾರೆ. ಆದರೆ ಒಂದಲ್ಲಾ ಒಂದು ಕಡೆ ಉಲ್ಟಾ ಮಾತುಗಳು ಹೊರಬಂದುಬಿಡುತ್ತವೆ. ಸತೋಪ್ರಧಾನ ಸ್ಥಿತಿಯಲ್ಲಿ ಈ ವಿಚಾರವೇ ಇರುವುದಿಲ್ಲ. ಇದು ಬಲಹೀನತೆಯಾಗಿದೆ ಎಂಬುದು ತಿಳಿದುಕೊಳ್ಳದ ಕಾರಣ ತಮ್ಮನ್ನು ತಾವು ಬಹಳ ಒಳ್ಳೆಯವರು (ಮಿಯಾಮಿಟ್ಟು) ಎಂದು ತಿಳಿದುಕೊಂಡಿದ್ದಾರೆ. ಬಾಬಾ ಹೇಳುತ್ತಾರೆ ಒಳ್ಳೆಯವನು ನಾನೊಬ್ಬನೇ ಆಗಿದ್ದೇನೆ, - ನಿವೆಲ್ಲರನ್ನೂ ಮಧುರರನ್ನಾಗಿ ಮಾಡಲು ಬಂದಿದ್ದೇನೆ. ಎಲ್ಲಾ ಅವಗುಣವನ್ನೆಲ್ಲಾ ಬಿಟ್ಟುಬಿಡಿ. ತಮ್ಮ ನಾಡಿಯನ್ನು ನೊಡಿಕೊಳ್ಳಿ. ನಾವು ಮಧುರಾತಿ-ಮಧುರ ಬಾಬಾರವರನ್ನು ಪ್ರೀತಿಯಿಂದ ಎಷ್ಟು ನೆನಪು ಮಾಡುತ್ತೇವೆ. ಎಷ್ಟು ಸ್ವತಃ ನಾನು ತಿಳಿದಿಕೊಂಡಿದ್ದೇನೆ. ಹಾಗೂ ಅನ್ಯರಿಗೆ ತಿಳಿಸುತ್ತೇನೆ. ದೇಹಾಭಿಮಾನದಲ್ಲಿ ಬಂದರೆ ಯಾವುದೇ ಲಾಭವಿಲ್ಲ. ಪ್ರಪಂಚ ತಮೋಪ್ರಧಾನವಾಗಿದೆ ಎಂಬ ಮೂಲ ಮಾತನ್ನು ತಿಳಿಸಿಕೊಡಬೇಕಾಗಿದೆ. ಸತೋಪ್ರಧಾನವಾಗಿದ್ದಾಗ ದೇವತೆಗಳ ರಾಜ್ಯವಿತ್ತು. ಈಗ 84 ಜನ್ಮವನ್ನು ಭೋಗಿಸಿ ತಮೋಪ್ರಧಾನಾಗಿದ್ದೇವೆ, ಈಗ ಪುನಃ ಸತೋಪ್ರಧಾನರಾಗಬೇಕಾಗಿದೆ. ತಮೋಪ್ರಧಾನವೂ ಸಹ ಭಾರತವಾಸಿಗಳೇ ಆಗಿದ್ದಾರೆ ಹಾಗೂ ಅವರೇ ಸತೋಪ್ರಧಾನರಾಗಬೇಕಾಗಿದೆ. ಬೇರೆಯಾರನ್ನೂ ಸಹ ಸತೋಪ್ರಧಾನರೆಂದು ಹೇಳಲು ಸಾಧ್ಯವಿಲ್ಲ. ಸತ್ಯಯುಗದಲ್ಲಿ ಯಾವುದೇ ಧರ್ಮವಿರುವುದಿಲ್ಲ. ಬಾಬಾರವರು ಹೇಳುತ್ತಾರೆ - ನೀವು ಅನೇಕ ಬಾರಿ ತಮೋಪ್ರಧಾನರಿಂದ ಸತೋಪ್ರಧಾನರಾಗಿದ್ದೀರಿ, ಈಗ ಪುನಃ ಆಗಿರಿ. ಶ್ರೀಮತದಂತೆ ನಡೆದು ನನ್ನನ್ನು ನೆನಪು ಮಾಡಿರಿ. ಇದೇ ನಶೆಯಲ್ಲಿ ಇರಬೇಕು.

ಶಿರದ ಮೇಲೆ ಬಹಳ ಪಾಪದ ಹೊರೆಯಿದೆ, ಬಾಬಾರವರು ಈಗ ಸುಜಾಗರೂಕರನ್ನಾಗಿ ಮಾಡಿದ್ದಾರೆ. ದೇವತೆಗಳ ಮುಂದೆ ಹೋಗಿ ಹೇಳುತ್ತಾರೆ - ನಾವು ವಿಕಾರಿಗಳಾಗಿದ್ದೇವೆ, ಏಕೆಂದರೆ ದೇವತೆಗಳಲ್ಲಿ ಪವಿತ್ರತೆಯ ಆಕರ್ಷಣೆಯಿದೆ ಆದ್ದರಿಂದ ಅವರ ಸನ್ಮುಖದಲ್ಲಿ ಹೋಗಿ ಹೇಳುತ್ತಾರೆ ಹಾಗೂ ಮನೆಗೆ ಹೋಗಿ ಮರೆತು ಬಿಡುತ್ತಾರೆ. ದೇವತೆಗಳ ಸನ್ಮುಖದಲ್ಲಿ ಹೋದಾಗ ತಮ್ಮ ಮೇಲೆ ತಿರಸ್ಕಾರ ಉಂಟಾಗುತ್ತದೆ. ಮನೆಗೆ ಹೋದಾಗ ಯಾವುದೇ ತಿರಸ್ಕಾರ ವಿರುವುದಿಲ್ಲ. ಇವರನ್ನು ಈರೀತಿ ತಯಾರಿಸುವವರು ಯಾರು? ಎಂದು ವಿಚಾರವನ್ನೂ ಸಹ ಮಾಡುವುದಿಲ್ಲ. ಈಗ ಬಾಬಾರವರು ಹೇಳುತ್ತಾರೆ- ದೇವತೆಗಳಾಗಬೇಕೆಂದಿದ್ದರೆ ಈ ವಿದ್ಯೆಯನ್ನು ಅವಶ್ಯವಾಗಿ ಓದಿ. ಶ್ರೀಮತದಂತೆ ನಡೆಯಬೇಕಾಗುತ್ತದೆ. ಮೊದ-ಮೊದಲಿಗೆ ಬಾಬಾರವರು ಹೇಳುತ್ತಾರೆ ತಮ್ಮನ್ನು ಸತೋಪ್ರಧಾನರನ್ನಾಗಿ ಮಾಡಿಕೊಳ್ಳಬೇಕಾಗಿದೆ ಆದ್ದರಿಂದ (ಮಾಮೇಕಂ) ನನ್ನೊಬ್ಬ ತಂದೆಯನ್ನು ನೆನಪು ಮಾಡಿರಿ ಬೇರೆಯಾವುದೇ ವಿಚಾರವನ್ನು ಅಲ್ಲಿಂದ- ಇಲ್ಲಿಗೆ ಮಾಡಬೇಡಿ. ನಾವು ಈ ರೀತಿ ಆಗಬೇಕೆಂದು ತಮ್ಮದೇ ನಶೆಯಲ್ಲಿರಿ. ಬಾಬಾ ಹೇಳುತ್ತಾರೆ ನೀವೇ ಆದಿ ಸನಾತನ ದೇವಿ- ದೇವತಾ ಧರ್ಮದವರಾಗಿದ್ದಿರಿ, ತದನಂತರ ಎಲ್ಲಿಗೆ ಹೋದಿರಿ! ಇದಕ್ಕೆ 84 ಜನ್ಮಗಳ ಕತೆಯನ್ನು ಬರೆಯಲಾಗಿದೆ. ಬಾಬಾರವರಿಂದ ಆಸ್ತಿಯನ್ನು ಪಡೆಯಬೇಕು. ಬುದ್ಧಿಯಲ್ಲಿ ಬರಬೇಕು ನಿಂದನೆ ಸ್ತುತಿಯನ್ನಂತೂ ಮಾಡುತ್ತಲೇ ಇರುತ್ತಾರೆ. ವಾಸ್ತವದಲ್ಲಿ ಸ್ತುತಿಯಂತೂ ಇರುವುದೇ ಇಲ್ಲ. ನಿಂದನೆಯೇ ಇದೆ. ಒಂದುಕಡೆ ಯಾರನ್ನು ಸ್ತುತಿಸುತ್ತಾರೆ. ಅವರನ್ನೇ ಇನ್ನೊಂದುಕಡೆ ನಿಂದನೆಯನ್ನೂ ಮಾಡುತ್ತಾರೆ. ಏಕೆಂದರೆ ತಿಳುವಳಿಕೆಯಿಲ್ಲ. ಒಂದು ಕಡೆ ಬಾಬಾರವರ ಮಹಿಮೆ ಮಾಡುತ್ತಾರೆ, ಇನ್ನೊಂದು ಕಡೆ ಸರ್ವವ್ಯಾಪಿ ಎಂದು ಹೇಳುತ್ತಾರೆ. ಕಲ್ಲು ಮುಳ್ಳಲ್ಲಿ ಪರಮಾತ್ಮನಿದ್ದಾರೆ. ಎಂದು ಹೇಳುವುದರಿಂದ ಪರಮಾತ್ಮನಿಂದ ಬೆಮುಖರಾಗಿದ್ದಾರೆ. ವಿನಾಶ ಕಾಲೇ ವಿಪರೀತ ಬುದ್ಧಿ ವಿನಶ್ಯಂತಿ, ವಿನಾಶ ಕಾಲೇ ಪ್ರೀತಿ ಸನ್ಮುಖಿ ಬುದ್ಧಿ ವಿಜಯಂತಿ.

ಎಷ್ಟು ಸಾಧ್ಯ ಅಷ್ಟು ಪ್ರಯತ್ನ ಪಟ್ಟು ಬಾಬಾರವರ ನೆನಪಮನ್ನು ಮಾಡಬೇಕು. ಮೊದಲೆಲ್ಲಾ ನೆನಪು ಮಾಡಿದ್ದೀರಿ ಆದರೆ ಅದು ವ್ಯಭಿಚಾರಿ ನೆನಪಾಗಿತ್ತು. ಬಹಳಷ್ಟು ಜನರನ್ನು ನೆನಪು ಮಾಡುತ್ತಿದ್ದರು. ಈಗ ಬಾಬಾರವರು ಹೇಳುತ್ತಾರೆ ಅವ್ಯಭಿಚಾರಿ ನೆನಪನ್ನು ಮಾಡಿರಿ. ಕೇವಲ ಮಾಮೇಕರ ನೆನಪು ಮಾಡಿರಿ. ಭಕ್ತಿಮಾರ್ಗದಲ್ಲಿ ಅನೇಕ ಚಿತ್ರಗಳಿವೆ. ಅವುಗಳನ್ನೇ ನೀವು ನೆನಪು ಮಾಡುತ್ತಾ ಬಂದಿದ್ದೀರಿ. ಈಗ ಪುನಃ ಸತೋಪ್ರಧಾನರಾಗಬೇಕಾಗಿದೆ. ನೆನಪು ಮಾಡಲು ಅಲ್ಲಿ ಭಕ್ತಿಮಾರ್ಗವಿರುವುದೇ ಇಲ್ಲ. ಬಾಬಾರವರು ಹೇಳುತ್ತಾರೆ - ನಾವು ಸತೋಪ್ರಧಾನರು ಹೇಗೆ ಆಗಬೇಕು ಎಂದು ನಶೆಯಿರಬೇಕು. ಈ ಸೃಷ್ಟಿ ಚಕ್ರ ಹೇಗೆ ಸುತ್ತುತ್ತದೆ ಎಂಬ ಜ್ಞಾನ ನಿಮಗೆ ಸಿಕ್ಕಿದೆ. ಇದಂತೂ ಸಹಜವಾಗಿದೆ. ಒಳ್ಳೆಯದು, ಕೆಲವರಿಗೆ ಬಾಯಿಂದ ತಿಳಿಸಿ ಹೇಳಲು ಬಾರದೇ ಇರಬಹುದು, ಆದರೆ ಬುದ್ಧಿಯಲ್ಲಿ ಅವಶ್ಯವಾಗಿ ವಿಚಾರ ಬರುತ್ತದೆ ನಾವು ಸತೋಪ್ರಧಾನರಿಂದ ತಮೋಪ್ರಧಾನರು ಹೇಗಾದೆವು. ಈಗ ಪುನಃ ಸತೋಪ್ರಧಾನರು ಅವಶ್ಯ ಆಗಬೇಕು. ಒಂದುವೇಳೆ ಯಾರಿಗಾದರು ಹೇಳಲು ಬರುವುದಿಲ್ಲವೆಂದರೆ ಹೇಳುತ್ತಾರೆ ತಮ್ಮ ಅದೃಷ್ಟ ಹಾಗೂ ವಿಧಿ ಸಹ ಆಗಿದೆ. ಬಾಬಾರವರು ಬಹಳ ಸಹಜ ಉಪಾಯವನ್ನು ಹೇಳಿದ್ದಾರೆ - ಬ್ಯಾಡ್ಜ್ ಮೇಲೆಯು ಸಹ ತಿಳಿಸುವುದು ಸಹಜವಾಗಿದೆ. ಇವರಾಗಿದ್ದಾರೆ ಬೆಹದ್ದಿನ ತಂದೆ. ಇವರಿಂದಲೇ ಆಸ್ತಿ ಸಿಗುತ್ತದೆ. ಬಾಬಾರವರು ಅವಶ್ಯವಾಗಿ ಸ್ವರ್ಗದ ಸ್ಥಾಪನೆ ಮಾಡುತ್ತಾರೆ. ಅಂದಮೇಲೆ ಅವಶ್ಯವಾಗಿ ಇಲ್ಲಿಯೇ ಸ್ಥಾಪಿಸುತ್ತಾರೆ. ಶಿವಜಯಂತಿ ಎಂದರೆ ಸ್ವರ್ಗದ ಜಯಂತಿ ಎಂದರ್ಥ. ಸ್ವರ್ಗದಲ್ಲಿ ದೇವಿ-ದೇವತೆಗಳಿರುತ್ತಾರೆ. ಅವರು ಹೇಗೆ ತಯಾರಾದರು? ಅವರು ಈ ಸಂಗಮ ಯುಗದ ವಿದ್ಯಾಭ್ಯಾಸದಿಂದಲೇ ಆರೀತಿ ತಯಾರಾಗಿದ್ದಾರೆ. ನೀವು ಮಕ್ಕಳಿಗೆ ತಿಳುವಳಿಕೆ ಸಿಕ್ಕಿದೆ, ನಂತರ ಅನ್ಯರಿಗೂ ತಿಳುವಳಿಕೆಯನ್ನು ನೀಡಬೇಕಾಗಿದೆ. ನಿಮ್ಮದು ಸಹಜ ಜ್ಞಾನ, ಸಹಜ ಯೋಗ ಹಾಗೂ ಸಹಜ ಆಸ್ತಿಯಾಗಿದೆ. ಆದರೆ ಇಲ್ಲಿ ಕೆಲವರು ಬಿಡಿಗಾಸಿನಷ್ಟು ಆಸ್ತಿಯನ್ನು ಪಡೆಯುವವರೂ ಇದ್ದಾರೆ ಹಾಗೂ ಪದುಮದಷ್ಟು ಸಂಪಾಧನೆಯನ್ನು ಮಾಡಿಕೊಳ್ಳುವವರೂ ಸಹ ಇದ್ದಾರೆ. ವಿಧ್ಯೆಯೇ ಇವೆಲ್ಲದರ ಆಧಾರವಾಗಿದೆ. ನೆನಪಿನ ಯಾತ್ರೆಯಲ್ಲಿ ಬೇರೆಲ್ಲಾ ವಿಚಾರಗಳನ್ನು ಮರೆಯಿರಿ. ಇವರು ಹೀಗೆ... ಇದರಲ್ಲಿ ಸಮಯವನ್ನು ವ್ಯರ್ಥವಾಗಿ ಕಳೆಯಬೇಡಿ. ಗುರಿ ಬಹಳ ಉನ್ನತವಾಗಿದೆ. ಸತೋಪ್ರಧಾನವಾಗುವುದರಲ್ಲಿಯೇ ಮಾಯೆಯು ವಿಘ್ನವನ್ನು ಹಾಕುತ್ತದೆ. ವಿದ್ಯೆಯಲ್ಲಿ ವಿಘ್ನವಿರುವುದಿಲ್ಲ. ಬಾಬಾರವರು ಹೇಳುತ್ತಾರೆ - ತಮ್ಮನ್ನು ತಾವೇ ನೋಡಿಕೊಳ್ಳಿರಿ ನಮಗೆ ಎಷ್ಟು ಪ್ರೀತಿಯಿದೆ ಎಂದು. ಬಾಬಾರವರೊಂದಿಗೆ ಲೀನವಾಗಿರುವಷ್ಟು ಪ್ರೀತಿಯಿರಬೇಕು. ಕಲಿಸಿಕೊಡುವವರು ಬಾಬಾರವರಾಗಿದ್ದಾರೆ. ಇವರ ಆತ್ಮವು ಕಲಿಸುವುದಿಲ್ಲ, ಕಲಿಯುವಂತಹದ್ದಾಗಿದೆ. ಬಾಬಾರವರು ನಮ್ಮನ್ನು ಈಗ ಎಷ್ಟೊಂದು ತಿಳುವಳಿಕೆ ಉಳ್ಳವರನ್ನಾಗಿ ಮಾಡುತ್ತಾರೆ.

ಶ್ರೇಷ್ಠಾತಿ-ಶ್ರೇಷ್ಠ ನೀವಾಗಿದ್ದೀರಿ ಆದರೆ ಮನುಷ್ಯ ಸೃಷ್ಟಿಯಲ್ಲಿ ನೀವು ನಮ್ಮನ್ನು ಎಷ್ಟು ಶ್ರೇಷ್ಠರನ್ನಾಗಿ ಮಾಡುತ್ತೀರಿ. ಈ ರೀತಿಯಾಗಿ ಅಂತರಾಳದಿಂದ ಬಾಬಾರವರ ಮಹಿಮೆಯನ್ನು ಮಾಡಬೇಕು. ಬಾಬಾ ನೀವೆಷ್ಟು ಚಮತ್ಕಾರ ಮಾಡುತ್ತೀರಿ. ಬಾಬಾ ಹೇಳುತ್ತಾರೆ- ಮಕ್ಕಳೇ ಖುಷಿಯಿಂದ ನೀವು ಮನಃ ನಿಮ್ಮ ರಾಜ್ಯವನ್ನು ಪಡೆದುಕೊಳ್ಳಿರಿ ಹಾಗೂ ಮಾಮೇಕಂ ನೆನಪು ಮಾಡಿರಿ. ತಮ್ಮೊಂದಿಗೆ ಶ್ರೇಷ್ಠಾತಿ-ಶ್ರೇಷ್ಠ ನೀವಾಗಿದ್ದೀರಿ ಆದರೆ ಮನುಷ್ಯ ಸೃಷ್ಟಿಯಲ್ಲಿ ನೀವು ನಮ್ಮನ್ನು ಎಷ್ಟು ಶ್ರೇಷ್ಠರನ್ನಾಗಿ ಮಾಡುತ್ತೀರಿ. ಈ ರೀತಿಯಾಗಿ ಅಂತರಾಳದಿಂದ ಬಾಬಾರವರ ಮಹಿಮೆಯನ್ನು ಮಾಡಬೇಕು. ಬಾಬಾ ನೀವೆಷ್ಟು ಚಮತ್ಕಾರ ಮಾಡುತ್ತೀರಿ. ಬಾಬಾ ಹೇಳುತ್ತಾರೆ- ಮಕ್ಕಳೇ ಖುಷಿಯಿಂದ ನೀವು ಪುನಃ ನಿಮ್ಮ ರಾಜ್ಯವನ್ನು ಪಡೆದುಕೊಳ್ಳಿರಿ ಹಾಗೂ ಮಾಮೇಕಂ ನೆನಪು ಮಾಡಿರಿ. ತಮ್ಮೊಂದಿಗೆ ತಾವೇ ಕೇಳಿಕೊಳ್ಳಿರಿ - ನಾವು ಬಾಬಾರವರನ್ನು ಎಷ್ಟು ನೆನಪು ಮಾಡುತ್ತೇವೆ? ಹೇಳಲಾಗುತ್ತದೆ

ಖುಷಿಗಿಂತ ಔಷಧಿ ಬೇರೊಂದಿಲ್ಲ. ಬಾಬಾರವರೊಂದಿಗೆ ಮಿಲನ ಮಾಡುವ ಖುಷಿಯಿದೆ, ಆದರೆ ಇಷ್ಟೊಂದು ಖುಷಿ ಮಕ್ಕಳ ಅಂತರಾಳದಲ್ಲಿ ಇರುವುದಿಲ್ಲ. ಇಲ್ಲವಾದರೆ, ಬಹಳ ಖುಷಿಯಿಂದಿರಬೇಕೆಂದು ವಿವೇಕ ಹೇಳುತ್ತದೆ. ಈ ವಿದ್ಯೆಯಿಂದ ನಾವು ರಾಜರಾಗುವವರಿದ್ದೇವೆ. ಬೆಹದ್ದಿನ ತಂದೆಗೆ ನಾವು ಮಕ್ಕಳಾಗಿದ್ದೇವೆ. ಸುಪ್ರೀಮ್ ಬಾಬಾ ನಮಗೆ ಓದಿಸುತ್ತಿದ್ದಾರೆ. ಬಾಬಾರವರು ಎಷ್ಟು ದಯಾಹೃದಯಿಯಾಗಿದ್ದಾರೆ. ಹೇಗೆ ಕುಳಿತು ನೀವು ಮಕ್ಕಳಿಗೆ ಹೊಸ ಹೊಸ ವಿಚಾರಗಳನ್ನು ತಿಳಿಸಿಕೊಡುತ್ತಾರೆ. ಈಗ ನಿಮ್ಮ ಬುದ್ಧಿಯಲ್ಲಿ ಬಹಳ ಹೊಸ ಹೊಸ ಮಾತುಗಳಿವೆ, ಇವು ಯಾರ ಬುದ್ಧಿಯಲ್ಲಿಯೂ ಇಲ್ಲವಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಆಗಲಿ ಸಿಕ್ಕಿರುವ ಮಕ್ಕಳ ಪ್ರತಿಯಾಗಿ ಮಾತಾಪಿತ ಬಾಪ್ದಾದಾರವರ ನೆನಪಮ ಪ್ರೀತಿ ಹಾಗೂ ಶುಭೋದಯಗಳು. ಆತ್ಮಿಕ ತಂದೆಯಿಂದ ಆತ್ಮೀಕ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ದೇಹಿ ಅಭಿಮಾನಿ ಸ್ಥಿತಿಯನ್ನು ಧಾರಣೆ ಮಾಡಿಕೊಂಡು ಸುಖದಾಯಿಯಾಗಬೇಕು. ಯಾರದ್ದೇ ಬಲಹೀನಗೆಗಳನ್ನು ನೋಡಬಾರದು. ಪರಸ್ಪರದಲ್ಲಿ ಬಹಳ-ಬಹಳ ಪ್ರೀತಿಯಿಂದ ಇರಬೇಕು, ಮತಭೇದದಲ್ಲಿ ಬರಬಾರದು.

2. ಬೇರೆಲ್ಲಾ ವಿಚಾರಗಳನ್ನು ಮರೆತು ಒಬ್ಬ ತಂದೆಯಿಂದ ಗುಣ ಗ್ರಹಣ ಮಾಡಿಕೊಳ್ಳಬೇಕು. ಸತೋಪ್ರಧಾನರಾಗುವ ಚಿಂತನೆಯಲ್ಲಿರುಬೇಕು. ಯಾರದ್ದೇ ಮಾತುಗಳನ್ನು ಕೇಳಿಸಿಕೊಳ್ಳಬಾರದು. ನಿಂದಿಸಬಾರದು. ತಾನೇ (ಮಿಯಾಮಿಟ್ಟು) ಬುದ್ಧಿವಂತನೆಂದು ತಿಳಿದುಕೊಳ್ಳಬಾರದು.

ವರದಾನ: ಸಮಯ ಪ್ರಮಾಣ ಸ್ವಯಂ ಅನ್ನು ಚೆಕ್ ಮಾಡಿಕೊಂಡು ಚೇಂಜ್ ಆಗುವಂತಹ ಸದಾ ವಿಜಯಿ ಶ್ರೇಷ್ಠ ಆತ್ಮ ಭವ.
ಯಾರು ಸತ್ಯ ರಾಜಯೋಗಿಗಳಾಗಿದ್ದಾರೆ ಅವರು ಎಂದೂ ಯಾವುದೇ ಪರಿಸ್ಥಿತಿಯಲ್ಲಿ ವಿಚಲಿತರಾಗಲು ಸಾಧ್ಯವಿಲ್ಲ. ಆದ್ದರಿಂದ ತಮ್ಮನ್ನು ಸಮಯ ಪ್ರಮಾಣ ಇದೇ ರೀತಿಯಲ್ಲಿ ಚೆಕ್ ಮಾಡಿಕೊಳ್ಳಿ ಮತ್ತು ಚೇಂಜ್ ಆಗಿ. ಏಕೆಂದರೆ ಸಮಯ ಪ್ರಮಾಣ ಕರ್ತವ್ಯ ಮಾಡುವವರದೇ ಸದಾ ವಿಜಯವಾಗುವುದು. ಆದ್ದರಿಂದ ಸದಾ ವಿಜಯೀ ಶ್ರೇಷ್ಠ ಆತ್ಮ ಆಗಿ ತೀವ್ರ ಪುರುಷಾರ್ಥದ ಮೂಲಕ ನಂಬರ್ ವನ್ ನಲ್ಲಿ ಬಂದು ಬಿಡಿ.

ಸ್ಲೋಗನ್: ಮನಸ್ಸು-ಬುದ್ಧಿಯನ್ನು ನಿಯಂತ್ರಣ ಮಾಡುವ ಅಭ್ಯಾಸವಿದ್ದಾಗ ಸೆಕೆಂಡ್ ನಲ್ಲಿ ವಿದೇಹಿಗಳಾಗಲು ಸಾಧ್ಯ.